ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ,
ನಂ.4 ಕಟ್ಟಡಗಳ ಉಪವಿಭಾಗ
ಲೋಕೋಪಯೋಗಿ ಇಲಾಖೆ, ಬೆಂಗಳೂರು-560 001.

ದೂರವಾಣಿ ಸಂಖ್ಯೆ: 080-22267585
ಇ-ಮೇಲ್: aeeno4bldg@gmail.com

ಲೋಕೋಪಯೋಗಿ ಇಲಾಖೆ

ಸಂ: ಸಕಾಅ/ಕಉವಿ-4/ಸ.ಇಂ/ಕ.ದೃಢೀಕರಣ ಪತ್ರ/2023-24/1539 ದಿನಾಂಕ: 27/03/2024

ರವರಿಗೆ,

Secretary,
Nurture International School,
9th Mile Stone,
Hessarghatta Main Road,
Bagalgunt, Bangalore – 73

ಮಾನ್ಯರೆ,

ವಿಷಯ: ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡುವ ಬಗ್ಗೆ

ಉಲ್ಲೇಖ: 1. ಕರ್ನಾಟಕ ಸರ್ಕಾರ ಅಪರ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ರವರ ಸುತ್ತೋಲೆ ಪತ್ರ ಸಂಖ್ಯೆ: ಲೋಇ 59 ಬಿಇಡಿ 2019 ಬೆಂಗಳೂರು ದಿ: 07.05.2022
2. ತಮ್ಮ ಮನವಿ ಪತ್ರ ದಿನಾಂಕ: 21.03.2024

* * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, Nurture International School, 9th Mile Stone, Hessarghatta Main Road, Bagalgunt, Bangalore – 73 ಇಲ್ಲಿನ ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವಂತೆ ಉಲ್ಲೇಖ (2) ರ ಪತ್ರದಲ್ಲಿ ಮನವಿ ಸಲ್ಲಿಸಿರುತ್ತೀರಿ.

ಅದರಂತೆ, Nurture International School, 9th Mile Stone, Hessarghatta Main Road, Bagalgunt, Bangalore – 73 ಇಲ್ಲಿನ ಶಾಲಾ ಕಟ್ಟಡವನ್ನು ದಿನಾಂಕ: 26.03.2024 ರಂದು ಸಂಬಂಧಪಟ್ಟ ಇಂಜಿನಿಯರ್ ಹಾಗೂ ಆಡಳಿತಾಧಿಕಾರಿಗಳೊಂದಿಗೆ ಕಟ್ಟಡದ ಒಳಭಾಗ ಹಾಗೂ ಹೊರಭಾಗವನ್ನು ಪರಿವೀಕ್ಷಣೆ ಮಾಡಲಾಗಿ, ಜಂಟಿ ನಿರ್ದೇಶಕರು, ದಾಸರಹಳ್ಳಿ ವಲಯ, ಬಿ.ಬಿ.ಎಂ.ಪಿ. ಬೆಂಗಳೂರು ರವರು ನೆಲಮಹಡಿಯೊಂದಿಗೆ ಮೂರು ಅಂತಸ್ತಿನ ಕಟ್ಟಡ ನಿರ್ಮಾಣ ನಕ್ಷೆಗೆ ಮಂಜೂರಾತಿ ನೀಡಿರುತ್ತಾರೆ. ಪ್ರಸ್ತುತ ಕಟ್ಟಡವು ನೆಲ ಮಹಡಿಯೊಂದಿಗೆ ನಾಲ್ಕು ಅಂತಸ್ತಿನ ಆರ್.ಸಿ.ಸಿ. ಕಟ್ಟಡವನ್ನು 2020 ರಲ್ಲಿ ನಿರ್ಮಾಣ ಮಾಡಲಾಗಿದ್ದು, ನೆಲ & ಮೊದಲನೇ ಮಹಡಿಯಲ್ಲಿ ಮಾತ್ರ ಶಾಲಾ ಚಟುವಟಿಕೆಗಳು ನಡೆಯುತ್ತಿರುವುದು ಕಂಡುಬಂದಿರುತ್ತದೆ. ನೆಲ ಮಹಡಿಯಲ್ಲಿ ಒಟ್ಟು 04 ಕೊಠಡಿಗಳೊಂದಿಗೆ 02 ಶೌಚಾಲಯಗಳು, ಇನ್ನುಳಿದ ಮಹಡಿಗಳಲ್ಲಿ 10 ಕೊಠಡಿಗಳೊಂದಿಗೆ ಶೌಚಾಲಯಗಳನ್ನು ನಿರ್ಮಿಸಿರುವುದು ಕಂಡುಬಂದಿದ್ದು, ವಿಟ್ರಿಫೈಡ್ ನೆಲಹಾಸು, ಅಲ್ಯುಮಿನಿಯಂ ಸ್ಲೈಡಿಂಗ್ ಕಿಟಕಿಗಳು ಮತ್ತು ಫ್ಲಷ್ ಬಾಗಿಲುಗಳನ್ನು ಅಳವಡಿಸಲಾಗಿರುತ್ತದೆ.

ಸದರಿ ಕಟ್ಟಡವನ್ನು 2020 ರಲ್ಲಿ ನಿರ್ಮಿಸಿರುವುದರಿಂದ, ಉಲ್ಲೇಖ (1) ರ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಸದರಿ ಕಟ್ಟಡದ ದಾಖಲಾತಿಗಳನ್ನು ಪರಿಶೀಲಿಸಿ ಹಾಗೂ ಮೇಲ್ನೋಟಕ್ಕೆ ಕಟ್ಟಡದ ಸ್ಥಿತಿಗತಿಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಕಟ್ಟಡವು ಸುರಕ್ಷಿತವಾಗಿರುವುದು ಕಂಡುಬಂದಿರುತ್ತದೆ.

ತಾವುಗಳು ಈ ಕೆಳಕಂಡ ಅಗತ್ಯ ದಾಖಲೆಗಳನ್ನು ಸಲ್ಲಿಸಿರುತ್ತೀರಿ.

1. Sale deed certificate
2. Tax paid certificate
3. Sanction Plan

ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಲ್ಲಿನ ಕ್ರಮ ಸಂಖ್ಯೆ (2) ರಲ್ಲಿ ಸೂಚಿಸಿರುವಂತೆ ನಗರ ಪ್ರದೇಶದಲ್ಲಿ ಒಂದು ಶಾಲೆಗೆ / ಕಾಲೇಜಿಗೆ – ರೂ. 5,000.00 ಗಳನ್ನು ಶುಲ್ಕವಾಗಿ ಪಾವತಿಸಲು ಸೂಚಿಸಿರುವ ಹಿನ್ನಲೆಯಲ್ಲಿ ಸದರಿ ಸಂಸ್ಥೆಯವರು ಚಲನ್ ಉಲ್ಲೇಖ ಸಂಖ್ಯೆ: CR00324005900324507 dtd. 27.03.2024 ರಲ್ಲಿ ರೂ. 5,000.00 ಗಳನ್ನು ಪಾವತಿಸಿರುತ್ತಾರೆ.

ಸದರಿ ಕಟ್ಟಡದ ಎಲ್ಲಾ ಮಹಡಿಗಳು ಹಾಗೂ ಪ್ರಮುಖ ಭಾಗಗಳನ್ನು ಪರಿಶೀಲಿಸಲಾಯಿತು ಈ ಸಂದರ್ಭದಲ್ಲಿ ಯಾವುದೇ ಬಿರುಕುಗಳಾಗಲಿ ಅಥವಾ Dampness ಗಳಾಗಲಿ ಕಂಡುಬಂದಿರುವುದಿಲ್ಲ. ಹಾಗೂ ಕಟ್ಟಡದ ನಿರ್ವಹಣೆ ಮಾಡುವ ಜವಾಬ್ದಾರಿಯು ಸದರಿ ಸಂಸ್ಥೆಯವರದಾಗಿರುತ್ತದೆ ಮತ್ತು ಈ ಪ್ರಮಾಣ ಪತ್ರವನ್ನು ಯಾವುದೇ ಸಮಯದಲ್ಲಿ ಹಿಂಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

ಮುಂದಿನ ದಿನಗಳಲ್ಲಿ ಕಟ್ಟಡದಲ್ಲಿ ಯಾವುದಾದರೂ ಬದಲಾವಣೆ ಅಥವಾ ಹೆಚ್ಚುವರಿಯಾಗಿ ನಿರ್ಮಾಣ ಮಾಡಿದಲ್ಲಿ ಸದರಿ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುವುದು. ಆದ್ದರಿಂದ ಸದರಿ ಪ್ರಮಾಣ ಪತ್ರವನ್ನು Nurture International School, 9th Mile Stone, Hessarghatta Main Road, Bagalgunt, Bangalore – 73 ಇಲ್ಲಿನ ಶಾಲಾ ಕಟ್ಟಡಕ್ಕೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳಲು ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು,
೪ ನಂ 4 ಕಟ್ಟಡಗಳ ಉಪವಿಭಾಗ, ಬೆಂಗಳೂರು
ನಂ 4, ಕಟ್ಟಡಗಳ ಉಪ–ವಿಭಾಗ
ಬೆಂಗಳೂರು –560001